1.ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ನಾನು ಒಂದು ಅಡ್ಜರ್ನ್‌ಮೆಂಟ್ ಮೋಶನ್ ಕೊಟ್ಟಿದ್ದೆ.

ಅಧ್ಯಕ್ಷರು: ಪ್ರಶ್ನೋತ್ತರ ಮುಗಿಯಲಿ. ಜಿ.ಕೃಷ್ಣ ಪಾಲೇಮಾರ್

(ಮಾನ್ಯ ಸದಸ್ಯರು ಸದನದಲ್ಲಿ ಹಾಜರಿರಲಿಲ್ಲ.)

ಅಧ್ಯಕ್ಷರು: ಹೆಚ್. ಹಾಲಪ್ಪನವರೆ, ತಾವು ಪ್ರಶ್ನೆ ಕೇಳಿ

ಶಾಲೆಗಳಲ್ಲಿ ಸೈಕಲ್ ಸ್ಟ್ಯಾಂಡ್‌ಗಳನ್ನು ನಿರ್ಮಿಸುವುದು.

32(336) ಶ್ರೀ ಹಾಲಪ್ಪ ಹೆಚ್(ಹೊಸನಗರ)

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಸರ್ಕಾರಿ ಪ್ರಥಶಿಕ್ಷಣ ಶಾಲೆ ವಿದ್ಯಾರ್ಥಿಗಳಿಗೆ ಸರ್ಕಾರ ವಿತರಿಸುವ ಉಚಿತ ಸೈಕಲ್‌ಗಳನ್ನು ನಿಲ್ಲಿಸಲು ಸೂಕ್ತ ವ್ಯವಸ್ಥೆ ಇಲ್ಲದೆ ಇದ್ದು ಮಲೆನಾಡಿನಲ್ಲಿ ಮಳೆಯಲ್ಲಿ ತೋಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಸರ್ಕಾರವು ಶಾಲೆಗಳಲ್ಲಿ ಸೈಕಲ್ ಸ್ಟ್ಯಾಂಡ್ ನಿರ್ಮಿಸುವ ಉದ್ದೇಶವಿದೆಯೇ?

ಉತ್ತರ: ಶ್ರೀ ಎಂ.ಪಿ.ಪ್ರಕಾಶ್ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಪರವಾಗಿ

ಅ) ಸೈಕಲ್‌ಗಳನ್ನು ನಿಲ್ಲಿಸಲು ಸೂಕ್ತ ವ್ಯವಸ್ಥೆ ಇಲ್ಲದೆ ಇದ್ದರೆ ಮಳೆಯಲ್ಲಿ ನೆನೆಯುವುದು ಸ್ವಾಭಾವಿಕ

ಆ) ಆದರೆ ಲಭ್ಯವಿರುವ ಆಯವ್ಯಯದಲ್ಲಿ ಶಾಲಾ ಕೊಠಡಿಗಳಿಗೆ ಆದ್ಯತೆ ನೀಡುತ್ತಿರುವುದರಿಂದ ಸೈಕಲ್ ಸ್ಟ್ಯಾಂಡ್‌ಗಳನ್ನು ನಿರ್ಮಿಸುವ ಉದ್ದೇಶ ಸರ್ಕಾರಕ್ಕೆ ಸದ್ಯಕ್ಕೆ ಇರುವುದಿಲ್ಲ.

ಶ್ರೀ ಹೆಚ್.ಹಾಲಪ್ಪ: ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ. ಈ ಸರ್ಕಾರ ಒಂದು ಒಳ್ಳೆಯ ಕೆಲಸವನ್ನು ಮಾಡಿದೆ. ಮಾನ್ಯ ಯಡಿಯೂರಪ್ಪನವರು ಪ್ರೌಢಶಾಲಾ ಮಕ್ಕಳಿಗೆ ಸೈಕಲ್‌ಗಳನ್ನು ಕೊಟ್ಟಿದ್ದಾರೆ. ಮಲೆನಾಡಿನಲ್ಲಿ ಮೂರು ತಿಂಗಳುಗಳ ಕಾಲ ಮಳೆಗಾಲವಿರುತ್ತದೆ. ಹೀಗಿರುವಾಗ ಈ ಸೈಕಲ್‌ಗಳನ್ನು ನಿಲ್ಲಿಸಲು ಸೈಕಲ್ ಸ್ಟ್ಯಾಂಡ್ ಅಗತ್ಯವಿರುತ್ತದೆ. ಕಳೆದ ವರ್ಷ 8ನೇ ತರಗತಿಯವರೆಗೆ ಸೈಕಲ್ ಕೊಟ್ಟಿದ್ದಾರೆ. ಅವರು ಈಗ 9ನೇ ತರಗತಿಗೆ ಬರುತ್ತಾರೆ. ಈ ವರ್ಷ ಹೊಸದಾಗಿ ಬರುವ 8ನೇ ತರಗತಿಯವರೆಗೆ ಸೈಕಲ್ ಕೊಡುತ್ತಾರೆ. ಅಂದರೆ ಮುಂದಿನ ವರ್ಷಕ್ಕೆ ಪ್ರೌಢಶಾಲೆಯ ಎಲ್ಲ ಮಕ್ಕಳು ಸೈಕಲ್‌ಗಳನ್ನು ಹೊಂದೆ ಇರುತ್ತಾರೆ. ಮಳೆಯಲ್ಲಿಯೇ ಸೈಕಲ್‌ಗಳನ್ನು ನಿಲ್ಲಿಸಿದರೆ ಒಂದೆರಡು ವರ್ಷದಲ್ಲಿಯೇ ಸೈಕಲ್‌ಗಳು ಹಾಳಾಗಿ ಹೋಗುತ್ತದೆ. ಆದುದರಿಂದ ಮಲೆನಾಡಿನಲ್ಲಿ ಸೈಕಲ್ ಸ್ಟ್ಯಾಂಡ್‌ಗಳಿಗೋಸ್ಕರ ಮುಂದಿನ ಹಣಕಾಸು ವರ್ಷದಲ್ಲಿ ಹಣವಿಟ್ಟು ಸೈಕಲ್ ಸ್ಟ್ಯಾಂಡ್‌ಗಳನ್ನು ಒದಗಿಸಿಕೊಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್(ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ, ಉತ್ತಮವಾದ ಸಲಹೆಯನ್ನು ಮಾನ್ಯ ಸದಸ್ಯರು ಕೊಟ್ಟಿದ್ದಾರೆ. ಈಗ ಆದ್ಯತೆಗಳನ್ನು ನಾವು ನಿರ್ಣಯ ಮಾಡಬಹುದು. ಮಾನ್ಯ ಉಪ ಮುಖ್ಯಮಂತ್ರಿಗಳು ಎಲ್ಲಾ ಹೆಣ್ಣುಮಕ್ಕಳು ವಿದ್ಯಾವಂತರಾಗಬೇಕೆನ್ನುವ ಸದುದ್ದೇಶದಿಂದ ಈ ಒಂದು ಕಾರ್ಯಕ್ರಮವನ್ನು ಪ್ರಾರಂಭಿಸಿದರು. ಏಕೆಂದರೆ ಹೆಣ್ಣುಮಕ್ಕಳು ದೂರು ದೂರದಿಂದ ಬಂದು ವಿದ್ಯಾಭ್ಯಾಸವನ್ನು ಪಡೆಯಲಿ ಎಂದು ಈ ಕಾರ್ಯಕ್ರಮವನ್ನು ಮಾಡಿದ್ದರಿಂದ 1,75,023 ವಿದ್ಯಾರ್ಥಿಗಳು ಈ ಕಾರ್ಯಕ್ರಮದ ಸಂಪೂರ್ಣವಾದ ಲಾಭವನ್ನು ಪಡೆದಿದ್ದಾರೆ.

ಹಾಗೆ ಗಂಡುಮಕ್ಕಳಿಗೂ ಸಹ ಕೊಡಬೇಕೆನ್ನುವ ಪ್ರಸ್ತಪ ಇದ್ದುದರಿಂದ ಆ ಬಗ್ಗೆಯೂ ಕೂಡ 8ನೇ ತರಗತಿಯಲ್ಲಿ ವಿಧ್ಯಾಬ್ಯಾಸ ಮಾಡುವಂತಹ ವರಿಗೆ ಕೊಟ್ಟಿದ್ದೇವೆ. ಒಟ್ಟು 49,79,59,000 ರೂಪಾಯಿಗಳನ್ನು 2,45,300 ವಿದ್ಯಾರ್ಥಿಗಳಿಗೆ ಕೊಡುವುದರ ಮೂಲಕ ಭಾರತ ದೇಶದಲ್ಲಿ ನಮ್ಮ ಕರ್ನಾಟಕ ವಿಕ್ರಮವನ್ನು ಸಾಧಿಸಿದೆ. ಶೀಕ್ಷಣಕ್ಕೆ ಎಂತಹ ಆದ್ಯತೆ ಹಾಗೂ ಪ್ರಧಾನ್ಯತೆಯನ್ನು ಕೊಟ್ಟಿದೆ ಎನ್ನುವುದನ್ನು ತೋರಿಸಿಕೊಡುತ್ತದೆ. ಮಾನ್ಯ ಸದಸ್ಯರು ಹೇಳಿದಂತೆ ನಮ್ಮ ಆದ್ಯತೆ ಮೊದಲು ಶಾಲಾ ಕೊಠಡಿಗಳನ್ನು ಕಟ್ಟಬೇಕು ಎನ್ನುವುದು ಮುಖ್ಯವಾಗಿರುವುದರಿಂದ ಮೊದಲು ಅದನ್ನು ಕಟ್ಟುತ್ತೇವೆ. ಅದಾದ ಮೇಲೆ ಎರಡನೇ ಆದ್ಯತೆ ಸೈಕಲ್ ಸ್ಟ್ಯಾಂಡ್‌ಗಳನ್ನು ಮಾಡಿಕೊಡತಕ್ಕಂಥಾದ್ದು ಮಾಡುತ್ತೇವೆ.

ಶ್ರೀ ಹೆಚ್. ಹಾಲಪ್ಪ: ಸೈಕಲ್ ಕೊಡುವಂತಹ ಒಳ್ಳೆಯ ಕೆಲಸ ಮಾಡಿದ್ದಾರೆ. ಆ ಸೈಕಲ್ಲುಗಳು ಸ್ವಲ್ಪ ದಿನ ಬಾಳಿಕೆ ಬರಬೇಕು ಎಂದರೆ, ಇಲ್ಲಿ ಮಾನ್ಯ ಉಪಮುಖ್ಯಮಂತ್ರಿಗಳು ಇದ್ದಾರೆ. ಅದರ ಬಗ್ಗೆ ಆಶ್ವಾಸನೆಯನ್ನು ಕೊಟ್ಟಿದ್ದರೆ ಚೆನ್ನಾಗಿ ಇರುತ್ತಿತ್ತು.

ಶ್ರೀ ಎಂ.ಪಿ.ಪ್ರಕಾಶ್: ಆದ್ಯತೆ ಮೇಲೆ ಸೈಕಲ್ ಸ್ಟ್ಯಾಂಡ್ ಕಟ್ಟಿಸುವುದಕ್ಕೆ ಪ್ರಯತ್ನವನ್ನು ಸರ್ಕಾರ ಮಾಡುತ್ತದೆ.

ಹೊಸದಾಗಿ ಸರ್ಕಾರಿ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜು ಮಂಜೂರಾತಿ

234 ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಾ)

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

1) 2007–08 ನೇ ಸಾಲಿನಲ್ಲಿ ರಾಜ್ಯದ ಯಾವ ಯಾವ ಗ್ರಾಮ ಮತ್ತು ನಗರಗಳಿಗೆ ಹೊಸದಾಗಿ ಸರ್ಕಾರಿ ಪ್ರೌಢಶಾಲೆಗಳನ್ನು ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡಲಾಗಿದೆ.